**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ 487/2018**

ಸಿಡಬ್ಲ್ಯೂ 3
ಪಿಡಬ್ಲ್ಯೂ 2

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲೋಕೇಶ್ |
| ತಂದೆಯ ಹೆಸರು | ಃ | ಪುಟ್ಟಸ್ವಾಮಿ |
| ವಯಸ್ಸು | ಃ | 52 ವರ್ಷ |
| ವೃತ್ತಿ | ಃ | ಖಾಸಗಿ ನೌಕರ |
| ವಾಸಸ್ಥಳ | ಃ | ವಿಜಯನಗರ, ವಿರಾಜಪೇಟೆ. |

**ದಿನಾಂಕ ಃ 10-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ ಃ**

1. ಚಾಸಾ-1, 2 ಹಾಗೂ 4 ರಿಂದ 6 ರವರ ಪರಿಚಯವಿರುವುದಿಲ್ಲ. ಆರೋಪಿ ಪರಿಚಯವಿರುತ್ತದೆ. ನಾನು ಗೋಣಿಕೊಪ್ಪ ರಸ್ತೆಯಲ್ಲಿ ಗಣೇಶ್ ಜ್ಯೂವೆಲರ್ಸ್ ಮತ್ತು ಬ್ಯಾಂಕರ್ಸ್ ಎಂಬ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಿಕೊಂಡಿರುವಾಗ 2013 ನೇ ಇಸವಿಯಲ್ಲಿ ಆರೋಪಿಯು ನಾಲ್ಕು ಗ್ರಾಂ ತೂಕದ ಚಿನ್ನದ ಸರವನ್ನು ನನ್ನ ಅಂಗಡಿಗೆ ತಂದು, ರೂ. 3.120/- ಕ್ಕೆ ಅಡವಿಟ್ಟಿರುತ್ತಾರೆ. ಅದೇ ದಿನ ಪೊಲೀಸರು ಸಂಜೆ 5.30 ಗಂಟೆಗೆ ಆರೋಪಿಯನ್ನು ನಮ್ಮ ಅಂಗಡಿಗೆ ಕರೆ ತಂದು ಅಡವಿಟ್ಟಿದ್ದ ಚಿನ್ನದ ಸರವನ್ನು ಚಾಸಾ1 ರವರ ಮನೆಯಲ್ಲಿ ಕಳ್ಳತನ ಮಾಡಿ ತಂದಿರುವ ವಿಚಾರವನ್ನು ತಿಳಿಸಿ, ಸದರಿ ಚಿನ್ನದ ಸರವನ್ನು ಪೋಲಿಸರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಅದೇ ದಿನ ಪೊಲೀಸರು ನನ್ನನ್ನು ಆರೋಪಿಯೊಂದಿಗೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಅಲ್ಲಿ ಆರೋಪಿಯು ತನ್ನ ಪ್ಯಾಂಟ್ ಜೇಬಿನಿಂದ ತೆಗೆದು ಹಾಜರುಪಡಿಸಿದ ನಾಲ್ಕು ಗ್ರಾಂವಿರುವ ಒಂದು ಚಿನ್ನದ ಬಳೆಯನ್ನು ಹಾಗೂ ನನ್ನ ಅಂಗಡಿಯಲ್ಲಿ ಗಿರಿವಿ ಇಟ್ಟಿದ್ದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ನನ್ನ ಹಾಗೂ ಚಾಸಾ4 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಅಮಾನತ್ತಪಡಿಸಿಕೊಂಡಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ

ನೀಡಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

2. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ನಿಪಿ3 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ನಿಪಿ4 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಚಿನ್ನದ ಸರ ಹಾಗೂ ಬಳೆ ಇರುವ ಭಾವಚಿತ್ರವನ್ನು ತೋರಿಸಿ, ಅದರಲ್ಲಿ ಕಾಣುತ್ತಿರುವ ಕಳ್ಳತನ ಮಾಡಿರುವ ಚಿನ್ನದ ಆಭರಣಗಳು ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಸದರಿ ಭಾವಚಿತ್ರವನ್ನು ನಿಪಿ5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ರಶೀದಿಯನ್ನು ತೋರಿಸಿ, ಅದು ನಾನು ಆರೋಪಿಗೆ ನೀಡಿರುವ ರಶೀದಿ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಸದರಿ ರಶೀದಿಯನ್ನು ನಿಪಿ6 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ )
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ 487/2018**

ಸಿಡಬ್ಲ್ಯೂ 4
ಪಿಡಬ್ಲ್ಯೂ 3

ಸಾಕ್ಷಿದಾರರ ಹೆಸರು : ತೌಫಿಕ್ ಕೆ ಹಚ್
ತಂದೆಯ ಹೆಸರು : ಲೇಟ್ ಹಸನ್
ವಯಸ್ಸು : 39 ವರ್ಷ
ವೃತ್ತಿ : ಖಾಸಗಿ ನೌಕರ
ವಾಸಸ್ಥಳ : ಅಂಬಟ್ಟಿ ಗ್ರಾಮ

**ದಿನಾಂಕ ಃ 10-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ ಃ**

1. ಚಾಸಾ-1 ರಿಂದ 3 ಹಾಗೂ 5 ಹಾಗೂ 6 ರವರ ಪರಿಚಯವಿರುತ್ತದೆ. ಆರೋಪಿ ಪರಿಚಯವಿರುತ್ತದೆ. ದಿನಾಂಕ 08-04-2013 ರಂದು ಚಾಸಾ1 ರವರ ಮನೆಯಲ್ಲಿ ಕಳ್ಳತನವಾಗಿರುವ ವಿಚಾರ ನನಗೆ ತಿಳಿದಿರುತ್ತದೆ. ಅದರಂತೆ ಪೊಲೀಸರು ಅದೇ ದಿನ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ ಮೇರೆಗೆ, ಅದರಂತೆ ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಆರೋಪಿ ಹಾಗೂ ಚಾಸಾ3 ರವರು ಹಾಜರಿದ್ದು, ಅಲ್ಲಿ ಪೊಲೀಸರು ತಾವು ನಡೆಸುವ ಅಮಾನತ್ತು ಮಹಜರಿಗೆ ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡಿದ್ದು, ಅದಕ್ಕೆ ನಾನು ಒಪ್ಪಿರುತ್ತೇನೆ. ನಂತರ ಅಲ್ಲಿ ಆರೋಪಿಯು ತನ್ನ ಪ್ಯಾಂಟ್ ಜೇಬಿನಿಂದ ಹಾಜರುಪಡಿಸಿದ ನಾಲ್ಕು ಗ್ರಾಂವಿರುವ ಒಂದು ಚಿನ್ನದ ಬಳೆಯನ್ನು ಹಾಗೂ ನನ್ನ ಅಂಗಡಿಯಲ್ಲಿ ಗಿರಿವಿ ಇಟ್ಟಿದ್ದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ನನ್ನ ಹಾಗೂ ಚಾಸಾ3 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಅಮಾನತ್ತಪಡಿಸಿಕೊಂಡಿರುತ್ತಾರೆ. ಸದರಿ ಮಹಜರಿನ ಸಮಯದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

2. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ4 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ

ಗುರುತಿಸಿದ್ದನ್ನು ಈಗಾಗಲೇ ನಿಪಿ 5 ಹಾಗೂ 6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ )
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.